ಬೆಳಗಿನ ಸಮಯ. ಬಾಗಿಲ ಬೆಲ್ಲು ಬಾರಿಸಿತು. ನಾನು ಬಾಗಿಲು ತೆರೆದು ನೋಡಿದೆ. ಎದುರಿಗೆ ಸಾಥಿಯಾ ನಿಂತಿದ್ದ! ಅವನ ಕೈಯಲ್ಲೊಂದು ತೆಂಗಿನಕಾಯಿ ಇತ್ತು. ಅದರ ಒಂದು ಕಣ್ಣಲ್ಲಿ ಮೊಳಕೆಯೊಡೆದಿತ್ತು.

"ಸಾಥಿಯಾ, ಇದೇನು?" ಕೇಳಿದೆ.

"ಬಾಬೂಜಿ, ಇದು ತೆಂಗಿನ ಸಸಿ. ಇದನ್ನು ನಾನು ತಮ್ಮ ಬೆಡ್‌ರೂಮಿನ ಕಿಡಕಿಯ ಬದಿಯಲ್ಲಿರುವ ಖಾಲಿ ಸ್ಥಳದಲ್ಲಿ ನೆಡಬೇಕೆಂದಿದ್ದೇನೆ."

"ಹಾಗೆ ಮಾಡಲು ನೀನು ಕಾಶೀರಾಮ ಅವರ ಅನುಮತಿ ಪಡೆದುಕೊಂಡಿರುವೆಯಾ? ಅವರ ಬೆಡ್‌ರೂಮಿನ ಎದುರಿನಲ್ಲಿಯೂ ಖಾಲಿ ಜಾಗೆಯಿದೆ."

"ಕಾಶೀರಾಮ ಅವರೆ? ಹಾಂ!" ಸಾಥಿಯಾನ ಮುಖದಲ್ಲಿ ವ್ಯಂಗ್ಯಭರಿತ ನಗು ಮೂಡಿತು. ಅವನ ಕಣ್ಣುಗಳು ಅರೆತೆರೆದಂತಾದವು. ಗಡ್ಡ ಮೀಸೆಗಳು ಅಸ್ತವ್ಯಸ್ಥಗೊಂಡವು. "ಆತ ಗಿಡ ಮರಗಳ ಕಡು ವೈರಿ" ಎಂದ ಸಾಥಿಯಾ.

"ಯಾಕೆ, ಹೀಗೇಕೆ ಹೇಳುವಿ?" ಕೇಳಿದೆ.

"ನಾನು ಅವರ ಕಿಡಕಿಯ ಎದುರಿನ ಸ್ಥಳದಲ್ಲಿ ಒಂದು ಒಳ್ಳೆ ಜಾತಿಯ ಮಾವಿನ ಸಸಿಯನ್ನು ನೆಟ್ಟಿದ್ದೆ. ಅದು ಚೆನ್ನಾಗಿ ಬೆಳೆದು ದೊಡ್ಡದಾಗಿತ್ತು. ಆದರೆ ಅವರು ಆ ಗಿಡವನ್ನು ಕಿತ್ತೆಸೆದುದು ಏಕೆ ಎಂಬುದು ತಮಗೆ ಗೊತ್ತಿದೆಯೇನು? ಆ ಮಾವಿನ ಗಿಡ ದೊಡ್ಡದಾದ ಮೇಲೆ ಅದಕ್ಕೆ ಮಾವಿನ ಕಾಯಿಗಳು ಬರುತ್ತವೆ. ಆಗ ಬೀದಿಯ ಹುಡುಗರು ಅವುಗಳಿಗೆ ಕಲ್ಲುಗಳನ್ನೆಸೆಯುತ್ತಾರೆ. ಅದರಿಂದಾಗಿ ನನ್ನ ಕಿಡಕಿಯ ಗಾಜುಗಳು ಒಡೆದು ಹೋಗುತ್ತವೆ. ಆದ್ದರಿಂದ ನಾನು ಆ ಮಾವಿನ ಗಿಡವನ್ನು ಕಿತ್ತೆಸೆದೆ ಎಂದು ಹೇಳಿದರು" ಎಂದ ಸಾಥಿಯಾ.

ಇದಾದ ಮೇಲೆ ನನಗೆ ಹೆಚ್ಚಿನ ವಿವರ ಬೇಕಾಗಿರಲಿಲ್ಲ. ನಾನು ಒಳಗೆ ಹೋಗಿ ಕಿಡಕಿಯ ಎದುರಿನ ಒಂದು ಸ್ಥಳವನ್ನು ಸಾಥಿಯಾನಿಗೆ ತೋರಿಸಿದೆ. ಸಾಥಿಯಾ ಎಲ್ಲಿಂದಲೊ ಒಂದು ಗುದ್ದಲಿಯನ್ನು ತಂದು ದೊಡ್ಡ ತಗ್ಗನ್ನು ತೆಗೆದು ಒಳಗೆ ಬಂದು ಸುಷ್ಮಾಳಿಗೆ, "ವೈನಿ, ಸ್ವಲ್ಪ ಉಪ್ಪನ್ನು ಕೊಡಿ. ಉಪ್ಪನ್ನು ಹಾಕುವುದರಿಂದ ತೆಂಗಿನ ಮರವು ಬೇಗ ಬೆಳೆಯುತ್ತದೆ" ಎಂದ.

"ಸಾಥಿಯಾ ದಾದಾ, ತೆಂಗಿನಮರವಷ್ಟೇ ಏಕೆ, ಈ ಜಾಗೆಯಲ್ಲಿ ಮಲ್ಲಿಗೆ, ಗುಲಾಬಿ ಮೊದಲಾದ ಸುಂದರ ಹೂಗಳ ಗಿಡಗಳನ್ನು ಹಚ್ಚಬಹುದು" ಎಂದಳು ಸುಷ್ಮಾ.

"ವೈನಿಯವರೆ, ತೆಂಗಿನಮರಕ್ಕಿಂತ ಬೇರೆ ಯಾವ ಮರವೂ ಈ ಪ್ರಪಂಚದಲ್ಲಿ ಉಪಯೋಗಿಯಾಗಿದೆ ಹೇಳಿ, ಬುಡದಿಂದ ತುದಿಯವರೆಗೆ ತೆಂಗಿನಮರದ ಎಲ್ಲ ಅಂಶವೂ ಉಪಯುಕ್ತವಾಗಿದೆ. ಇದರ ನೀರು ಅಮೃತಕ್ಕೆ ಸಮನಾದುದು. ಇದರ ಕೊಬ್ಬರಿಯು ಎಷ್ಟು ರುಚಿಯೆಂಬುದನ್ನು ಎಲ್ಲರೂ ಬಲ್ಲರು. ಇದರ ಪರಟೆಯಿಂದ ಬಡವರ ಅಡುಗೆ ಸಿದ್ಧವಾಗುತ್ತದೆ. ಅದರ ಮೇಲಿನ ಕಾತಿಯಿಂದ ವಿವಿಧ ರೀತಿಯ ಹಗ್ಗ ತಯಾರಿಸುತ್ತಾರೆ. ಗರಿಗಳು ಬಡವರ ಗುಡಿಸಲುಗಳಿಗೆ ಆಧಾರವಾಗಿರುತ್ತವೆ. ಆದುದರಿಂದ ಕೊಂಕಣದಲ್ಲಿ ಇದಕ್ಕೆ 'ಕಲ್ಪವೃಕ್ಷ' ಎನ್ನುತ್ತಾರೆ" ಎಂದು ವಿವರಿಸಿದ ಸಾಥಿಯಾ.

ಸುಷ್ಮಾ ಹಿತ್ತಾಳೆಯ ಪಾತ್ರೆಯೊಂದರಲ್ಲಿ ಉಪ್ಪನ್ನು ತಂದು ಸಾಥಿಯಾನಿಗೆ ಕೊಟ್ಟಳು. ಮಣ್ಣಿನೊಂದಿಗೆ ಉಪ್ಪನ್ನು ಬೆರೆಸಿ ಆತ ತೆಂಗಿನ ಸಸಿಯನ್ನು ಸಿದ್ಧಪಡಿಸಿದ ಕುಳಿಯಲ್ಲಿ ನೆಟ್ಟ.

ನಾನು ಕಿಡಕಿಯೊಳಗಿನಿಂದ ಎಲ್ಲವನ್ನು ನೋಡುತ್ತಿದ್ದೆ. ಸಾಥಿಯಾನು ಪ್ರತಿದಿನ ತಪ್ಪದೆ ಮುಂಜಾನೆ ಮತ್ತು ಸಾಯಂಕಾಲ ಆ ಗಿಡಕ್ಕೆ ನೀರನ್ನು ಹಾಕುತ್ತಿದ್ದ. ಗಿಡಮರಗಳೊಂದಿಗೆ